ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ನಡೆದ 'ಗೋದಾವರಿ ಸಂಗಮಮ್' ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮೋಹನ್ ಭಾಗವತ್‌ರವರು ಹಿಂದೂ ಧರ್ಮದಿಂದ ಮತಾಂತರಗೊಂಡಿರುವ ಮಂದಿಯನ್ನು ಮರಳಿ ಕರೆ ತರಬೇಕು ಎಂದು ಸ್ವಯಂಸೇವಕರಿಗೆ ಕರೆ ನೀಡಿದ್ದಾರೆ.

ಸಂಪುಟ : 43 ಸಂಚಿಕೆ : 11 ಪ್ಲವ – ಮಾರ್ಗಶಿರ ಕಲಿಯುಗಾಬ್ದ 5123 15–01–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಭಾರತಮಾತೆಯ ಸೇವೆಗಾಗಿ ತಮ್ಮ ಪ್ರತಿಭೆಯನ್ನು ಸಮರ್ಪಿಸಿದ ಸಾಮಾನ್ಯರು – ಘೋಷ್‌ವಾದಕ ಸ್ವಯಂಸೇವಕರು

॥ ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಮ್ ॥

ಇದು ವೇದ ವಾಕ್ಯ. ಹೆಜ್ಜೆಗೆ ಹಜ್ಜೆ ಸೇರಿಸಿ ನಡೆಯುವುದು, ಧ್ವನಿಗೆ ಧ್ವನಿ ಸೇರಿಸಿ ನುಡಿಯುವುದರಿಂದಾಗಿ ಮನಸ್ಸುಗಳು ಒಂದಾಗುತ್ತವೆ.

ಹಿಂದು ಸಮಾಜದ ಸಂಘಟನೆಯ ಕಾರ್ಯದಲ್ಲಿ ತೊಡಗಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಸಾಂಘಿಕ ವ್ಯಾಯಾಮ, ಸಂಚಲನ (March past) ಮತ್ತು ಸಾಂಘಿಕ ಗಾಯನದಂತಹ ಸಾಮೂಹಿಕ ಕ್ರಿಯೆಗಳಿಗೆ ಒತ್ತು ನೀಡುವುದು ಅತ್ಯಂತ ಸಹಜವೇ ಸರಿ.

ಪ್ರಾಚೀನ ಪರಂಪರೆಯಲ್ಲಿ ಮೈದಾನದ ಚಟುವಟಿಕೆಗಳಿಗೆ ಅಗತ್ಯವಾದ ಪ್ರಾಂಙ್ಗಣೀಯ ಸಂಗೀತ ಅಥವಾ ರಣಸಂಗೀತದ ಪದ್ಧತಿಯು ನಮ್ಮಲ್ಲಿ ಯಾವ ಸ್ವರೂಪದಲ್ಲಿತ್ತೆಂಬುದು ನಿಖರವಾಗಿ ತಿಳಿಸುವ ಮಾಹಿತಿ ಇಂದು ಅಲಭ್ಯ. ಯುದ್ಧದಲ್ಲಿ ಸೈನಿಕರ ಯುದ್ಧೋತ್ಸಾಹ ಹೆಚ್ಚಿಸಲು ರಣವಾದ್ಯ ಬಳಸುದ ಉಲ್ಲೇಖಗಳನ್ನು ನಾವು ಕಾಣಬಹುದು. ಮಹಾಭಾರತ ಯುದ್ಧದಲ್ಲಿ ಬಳಸಿದ ವಾದ್ಯಗಳ ವಿವರ ಭಗವದ್ಗೀತೆಯಲ್ಲಿ "ತಥಃ ಶಂಖಾಶ್ಚ ಭೇರ್ಯಶ್ಚ, ಪಣವಾನಕ ಗೋಮುಖಾಃ" ಉಲ್ಲೇಖವಾಗಿದೆ. ಐತಿಹಾಸಿಕವಾಗಿಯೂ ಕೊಂಬು, ಕಹಳೆ, ಭೇರಿ ನಗಾರಿಗಳನ್ನು ಬಳಕೆಯ ಉಲ್ಲೇಖವಿದೆ. ಆದರೆ ಅಲ್ಲಿ ಈ ವಾದ್ಯಗಳ ವಾದನದ ಶಾಸ್ತ್ರ ಇಂದು ಲುಪ್ತವಾಗಿದೆ.

ಆಧುನಿಕ ಸೈನ್ಯದಲ್ಲಿ ಅನುಶಾಸನ ಮತ್ತು ಕವಾಯಿತ್ತಿನಲ್ಲಿ ಸಾಮೂಹಿಕತೆ ತರಲು ಬ್ಯಾಂಡ್ ಬಳಸಿದವರು ಪಾಶ್ಚಿಮಾತ್ಯರು. ಯೂರೋಪಿನ ಸೈನ್ಯಗಳು ಬಳಸುತ್ತಿದ್ದ ಬ್ಯಾಂಡ್‌ಗಳು ಕೇವಲ ಆಕರ್ಷಕವಷ್ಟೆ ಅಲ್ಲದೆ ಸೈನಿಕರ ಮನೋಭೂಮಿಕೆಯನ್ನು ನಿರ್ಮಿಸುವುದರಲ್ಲು ಬಹಳ ಉಪಯುಕ್ತವಾದದು. ಇದನ್ನು ನೋಡುವ ಮತ್ತು ಕೇಳುವ ಸಾಮಾನ್ಯ ಜನರ ಮನಸ್ಸಿನ ಮೇಲು ಇದು ಪ್ರಭಾವ ಬೀರುವುದು ಅಷ್ಟೇ ಸತ್ಯ.

ದೇಶವನ್ನು ಸ್ವಾತಂತ್ರ ಗೊಳಿಸಲು ಸ್ವಯಂಸೇವಕರ ಮನಸ್ಸು ತುಡಿಯುತ್ತಿತ್ತು. ಯುವಜನರಲ್ಲಿ ಅನುಶಾಸನ, ಶಿಸ್ತು ಮೂಡಿಸಲು ಈ ಕಾರ್ಯವಿಧಾನವನ್ನು ಅನುಸರಿಸುವುದು ಒಂದು ಸಹಜ ಪ್ರಕ್ರಿಯೆಯಾಗಿತ್ತು.

ಸಂಘದಲ್ಲಿ ಪಥಸಂಚಲನ (Route March), ನಡೆಸಿದಾಗ ಎಲ್ಲರೂ ಹೆಜ್ಜೆಗೆ ಹೆಜ್ಜೆ ಸೇರಿಸಿ ನಡೆಯಲು ಘೋಷ್, (Band) ನ ಅವಶ್ಯಕತೆಯ ಅರಿವಾಯಿತು. ಸ್ವಯಂಸೇವಕರು ಚಂದಾ ಮೂಲಕ ಹಣ ಸಂಗ್ರಹಿಸಿ ಕೆಲವು ಹಳೆ ವಾದ್ಯಗಳನ್ನು ಖರೀದಿಸಿದರು. ಆದರೆ ಆ ವಾದ್ಯಗಳನ್ನು ನುಡಿಸಲು ಬೇಕಾದ ರಚನೆಗಳನ್ನು ಕಲಿಯುವ ಸವಾಲು ಸ್ವಯಂಸೇವಕರು ಎದುರಿಸಬೇಕಾಯಿತು.

ನಾಗಪುರದಲ್ಲಿದ್ದ ಬ್ರಿಟಿಷ್ ಸೈನ್ಯದ ಕನ್ಟೋನ್ಮೆಂಟ್ ನ ಗೋಡೆಯ ಹೊರಗೆ ನಿಂತು ಅವರು ನುಡಿಸುವ ರಚನೆಗಳನ್ನು ಕೇಳುವುದು, ಕೇಳಿಸಿಕೊಂಡ ಆ ರಾಗವನ್ನು ಮನನ ಮಾಡಿಕೊಂಡು ಭಾರತೀಯ ಸಂಗಿತ ಬಲ್ಲವರಿಂದ ಅದನ್ನು ಸ್ವರ ಬದ್ಧ ಗೊಳಿಸುವುದು, ಹೀಗೆ ಕಲಿತ ಕೆಲ ರಚನೆಗಳನ್ನು ಸಂಘದ ಘೋಷ್‌ನಲ್ಲಿ ಬಳಸಲು ಪ್ರಾರಂಭವಾಯಿತು.

ಮುಂದೆ ಬ್ರಿಟಿಷ್ ಸೈನ್ಯದಿಂದ ನಿವೃತ್ತರಾದ ಬ್ಯಾಂಡ್ ವಾದಕರ ಮೂಲಕ ಸ್ವಯಂಸೇವಕರು ಬ್ಯಾಂಡ್‌ನ ಕ್ರಮಬದ್ದ ಶಿಕ್ಷಣ ಪಡೆದರು.

"ಸ್ವತ್ವ" ಜಾಗೃತಿಯೂ ಸ್ವಾತಂತ್ರ್ಯದ ಸ್ವರೂಪವೇ. ಈ ಪ್ರಾಙ್ಗಣೀಯ ಅಥವ ರಣಸಂಗೀತವನ್ನು ಭಾರತೀಕರಣ ಗೊಳಿಸಲು ಸ್ವಯಂಸೇವಕರು ಉದ್ಯುಕ್ತರಾದರು. ಸ್ವಯಂಸೇವಕರ ಭಾಷೆಯಲ್ಲಿ ಸ್ನೇರ್ ಡ್ರಮ್ – ಆನಕವಾಯಿತು, ಬಾಸ್ ಡ್ರಮ್ – ಪಣವ,



ಬ್ಯೂಗಲ್ – ಶಂಖ, ಪಿಕಾಲೋ ವಂಶಿ, ವೇಣು, ಎಫೋನಿಯಂ – ಗೋಮುಖ, ಸ್ಯಾಕ್ಸಫೋನ್ – ನಾಗಾಂಗ, ಟ್ರಂಪೆಟ್ – ತೂರ್ಯ, ಸ್ಯಾಕ್ಸೋಫೋನ್ ಮಹಾಶಂಖವಾಯಿತು.

ಕೇವಲ ವಾದ್ಯಗಳ ಹೆಸರು ಬದಲಾವಣೆಗೆ ಈ ಕ್ರಮ ನಿಲ್ಲಲಿಲ್ಲ. ನುಡಿಸುವ ರಚನೆಗಳನ್ನು ಭಾರತೀಕರಣಗೊಳಿಸುವ ಕೆಲಸವನ್ನು ಪ್ರಾರಂಭಿಸಿದರು.

ಶಂಖವಾದನಕ್ಕೆ ಹೊಂದುವಂತಹ ಮೊದಲ ರಚನೆ "ಚೇತಕ್" ಕರ್ನಾಟಕದಲ್ಲಿ ರಚಿತವಾದುದು ಹೆಮ್ಮಯ ಸಂಗತಿಯೇ ಸರಿ. ಇಂದು ಸ್ವಯಂಸೇವಕರು ರಚಿಸಿದ ಭೂಪ್, ವಲಚಿ, ಕೇದಾರ, ತಿಲಕ್ ಕಾಮೋದ್, ರೇವತಿ, ಭಾಗೇಶ್ರೀ, ಪಿಲೂ ರಾಗಗಳನ್ನೊಳಗೊಂಡಂತೆ ಭಾರತೀಯ ಸಂಗೀತದ ಇನ್ನು ಅನೇಕ ರಾಗಾಧಾರಿತ ರಚನೆಗಳನ್ನು ನುಡಿಸುತ್ತಾರೆ. 80ರ ದಶಕದಲ್ಲಿ ನಡೆದ ಏಷ್ಯಾಡ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಸ್ವಯಂಸೇವಕರು ರಚಿಸಿದ ಶಿವರಾಜಃ ರಚನೆಯನ್ನು ಭಾರತೀಯ ಸೈನ್ಯದ ಬ್ಯಾಂಡ್ ನಲ್ಲಿ ನುಡಿಸಲಾಯಿತು.

ಸೈನ್ಯದಲ್ಲಿ ನುಡಿಸುವ ರಚನೆಗಳನ್ನು ಲಿಪಿ ಬದ್ದಗೊಳಿಸಲು ಸ್ಟಾಫ್ ನೊಟೇಷನ್‌ನ (Staff Notations) ಬಳಸುವ ಕ್ರಮವಿದೆ. ಭಾರತೀಯಕರಣದ ಈ ನಿಟ್ಟಿನಲ್ಲಿ ರಚನೆಗಳನ್ನು ಲಿಪಿಬದ್ದ ಗೊಳಿಸಿ ಘೋಷ್ ರಚನೆಗಳು ದೇಶಾದ್ಯಂತ ಒಂದೇ ರೀತಿಯಲ್ಲಿ ವಾದನ ಮಾಡಲು ಅನುಕೂಲವಾಗುವಂತೆ ಒಂದು ಸಮಾನ ಲಿಪಿಯ ಅವಶ್ಯಕತೆಯನ್ನು ಸ್ವಯಂಸೇವಕರು

ಪೂರೈಸಿದರು. ಹಿಂದುಸ್ಥಾನಿ ಸಂಗೀತದಲ್ಲಿ ಬಳಸುವ ಭಾತ್ಕಂಡೆ ಪದ್ಧತಿ ಮತ್ತು ಕರ್ನಾಟಕ ಸಂಗೀತದಲ್ಲಿ ಬಳಸುವ ಲಿಪಿ ಪದ್ಧತಿಯಿಂದ ಭಿನ್ನವಾದ ಒಂದು ನವೀನ ಪದ್ಧತಿಯ ಅವಿಷ್ಕಾರ ಪ್ರಾಙ್ಗಣೀಯ ಅಥವ ರಣಸಂಗೀತ ಕ್ಷೇತ್ರಕ್ಕೆ ಸಂಘದ ಕೊಡುಗೆಯಾಗಿದೆ.

ಕರ್ನಾಟಕದಲ್ಲಿ ಘೋಷ್ ವಿಕಾಸಕ್ಕಾಗಿ ಸ್ವರ್ಗೀಯ ಶ್ರೀ ಯಾದವರಾವ್ ಜೋಷಿಯವರ ಆಗ್ರಹ ಸದಾ ಸ್ಮರಣೀಯ. ಸಂಘದ ಪ್ರಚಾರಕರಾದ ಶ್ರೀ ಸುಬ್ಬು ಶ್ರೀನಿವಾಸ್ ಅವರನ್ನು ಘೋಷ್ ಶಿಕ್ಷಣ ಪಡೆಯಲು ಪುಣೆಗೆ ಕಳುಹಿಸಿದರು. ಕರ್ನಾಟಕದಲ್ಲಿ ಮೊದಲ ಘೋಷ್ ಪ್ರಮುಖರಾಗಿ ನಿಯುಕ್ತರಾದವರು ಶ್ರೀ. ಕೃ. ನರಹರಿಯವರು. ಒಂದು ಪ್ರಾಂತ ಸ್ಥರದಲ್ಲಿ ಘೋಷ್ ಕಾರ್ಯ ಗಮನಿಸಲು ನಿಯುಕ್ತರಾದವರು ಪ್ರಾಯಶಃ ದೇಶದಲ್ಲಿ ಶ್ರೀ ಕೃ. ನರಹರಿಯವರೇ ಮೊದಲಿಗರು. ಶ್ರೀ ಹರಿಬಾವೂ ವಝೆ, ಶ್ರೀ ಸುಬ್ಬು ಶ್ರೀನಿವಾಸ್, ಮೈಸೂರಿನ ಶ್ರೀ ಅನಂತ, ಬೆಂಗಳೂರಿನ ಶ್ರೀ ಟಿ.ಎಲ್. ರಾಘು ಮತ್ತು ಅಸಂಖ್ಯ ಸ್ಥಾನಿಯ ಕರ್ಯಕರ್ತರ ಅವಿರತ ಪರಿಶ್ರಮದಿಂದಾಗಿ ಇಂದು ಸಾವಿರಾರು ಘೋಷ್‌ವಾದಕರು ಕರ್ನಾಟಕದಲ್ಲಿ ಸಿದ್ಧರಾಗಿದ್ದಾರೆ. ಘೋಷ್ ರಚನೆಗಳಿಗೆ ಗೀತ ಸಾಹಿತ್ಯವನ್ನು ರಚಿಸುವ ಕಾರ್ಯದಲ್ಲಿ ಅಂದು ಸಂಘಚಾಲಕರಾಗಿದ್ದ ಸಂಸ್ಕೃತ ವಿದ್ವಾಂಸರು ಆದ ಶ್ರೀ ಬಾ.ರಾ. ಮೋಡಕ್, ಲೇಖಕ ಮತ್ತು ಕವಿ ಶ್ರೀ ಶಿವರಾಮು, ಕಳಸದ ಶ್ರೀ ಬಾಲಕೃಷ್ಣ ಕಾಮತ್ ಅವರ ಕೊಡುಗೆಯು ವಿಶೇಷವಾದುದು.

1973 ರಲ್ಲಿ ಸರಸಂಘಚಾಲಕ ಪೂ. ಶ್ರೀ ಗುರೂಜೀ ಅವರ ಕರ್ನಾಟಕ ಪ್ರಾಂತ ಪ್ರವಾಸದ ಸಂದರ್ಭದಲ್ಲಿ ಮೊದಲ ಪ್ರಾಂತ ಘೋಷ್ ಶಿಬಿರ ಬೆಂಗಳೂರಿನಲ್ಲಿ ನಡೆಯಿತು. ಕರ್ನಾಟಕದಾದ್ಯಂತ ಬಂದ 373 ವಾದಕರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಪಥಸಂಚಲನ ಮತ್ತು ಮೈದಾನದಲ್ಲಿನ ಈ ಎಲ್ಲ ವಾದಕರ ವಾದನದ ಮೇಳೈಸುವಿಕೆ (Synchronization) ಅಂದು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸೇನೆ ಮತ್ತು ಪೋಲೀಸ್ ಬ್ಯಾಂಡ್‌ನ ತಜ್ಞರ ಮೆಚ್ಚುಗೆ ಗಳಿಸಿತ್ತು.

1982 ರಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಪ್ರಾಂತ ತರುಣ ಶಿಬಿರ "ಹಿಂದು ಸಂಗಮ" ದಲ್ಲಿ 21,000

*2ನೇ ಪುಟಕ್ಕೆ...*

## ಸಂಸ್ಮರಣೆ


# ಸತ್ಯೇಂದ್ರನಾಥ ಬೋಸ್ (1 ಜನವರಿ 1894 – 4 ಫೆಬ್ರವರಿ 1974)

ಕ್ವಾಂಟಮ್ ಚಲನವನ್ನಾಧರಿಸಿದ ಸಂಖ್ಯಾಶಾಸ್ತ್ರಗಳಲ್ಲಿ ಎರಡು ವಿಧ. ಒಂದು, ಫರ್ಮಿ–ಡಿರ್ಯಾಕ್ ಸಂಖ್ಯಾಶಾಸ್ತ್ರ. ಇನ್ನೊಂದು, ಬೋಸ್–ಐನ್ಸ್ಟೀನ್ ಸಂಖ್ಯಾಶಾಸ್ತ್ರ. ಇದರಲ್ಲಿ ಎರಡನೆಯ ಸಂಖ್ಯಾಶಾಸ್ತ್ರ ಪದ್ಧತಿಯನ್ನು ಕಂಡು ಹಿಡಿದು ವಿಶ್ವವಿಖ್ಯಾತರಾದ ಭಾರತೀಯ ಭೌತವಿಜ್ಞಾನಿ, ಸತ್ಯೇಂದ್ರನಾಥ ಬೋಸ್.

ಸತ್ಯೇಂದ್ರನಾಥ ಬೋಸ್ ಜನವರಿ 1, 1894ರಂದು ಕಲ್ಕತ್ತಾದಲ್ಲಿ ಜನಿಸಿದರು. ತಂದೆ ಸುರೇಂದ್ರನಾಥ್ ಇಂಗ್ಲೀಷ್ ಶಿಕ್ಷಣ ಪಡೆದು ಈಸ್ಟ್ ಇಂಡಿಯಾ ರೇಲ್ವೆಯ ಎಂಜಿನೀಯರಿಂಗ್ ವಿಭಾಗದಲ್ಲಿ ಲೆಕ್ಕ ತಪಾಸಿಗನಾಗಿ ಕೆಲಸ ಮಾಡುತ್ತಿದ್ದರು. ತಾಯಿ ಆಮೋದಿನಿ ದೇವಿ. ಐದನೆಯ ವಯಸ್ಸಿನಲ್ಲಿ ಶಾಲೆಗೆ ಸೇರಿದ ಸತ್ಯೇಂದ್ರನಾಥ ಶಾಲೆಯಲ್ಲಿ ಜಾಣ ಹುಡುಗನಾಗಿದ್ದ.

ಈತ ಹಿಂದೂ ಸ್ಕೂಲಿನಲ್ಲಿ ಓದುತ್ತಿದ್ದಾಗ ಉಪೇಂದ್ರನಾಥ್ ಬಕ್ಷಿ ಎಂಬ ಶಿಕ್ಷಕರು ಗಣಿತದಲ್ಲಿ ಈತನ ಅಸಾಧಾರಣ ಪ್ರತಿಭೆಯನ್ನು ಗುರುತಿಸಿದರು. ಅವರ ಪ್ರೋತ್ಸಾಹದಿಂದ ಸತ್ಯೇಂದ್ರನಾಥ್ ಪರೀಕ್ಷೆಯಲ್ಲಿ ಉತ್ತಮ ಗುಣಾಂಕಗಳನ್ನು ಪಡೆದು ಪ್ರೆಸಿಡೆನ್ಸಿ ಕಾಲೇಜು ಸೇರಿದರು. ಇನ್ನೊಬ್ಬ ಖ್ಯಾತ ವಿಜ್ಞಾನಿ ಮೇಘನಾದ ಸಹಾ ಅವರೂ ಅದೇ ಕಾಲೇಜಿಗೆ ಸೇರಿದ್ದರು. ಇಬ್ಬರೂ ಒಳ್ಳೆಯ ಮಿತ್ರರು. ಬಿಎಸ್ಸಿಯಲ್ಲಿ ಸತ್ಯೇಂದ್ರನಾಥ್ ಬೋಸ್ ಮೊದಲನೆಯ ಸ್ಥಾನ ಪಡೆದರೆ ಮೇಘನಾದ ಸಹಾ ಎರಡನೆಯ ಸ್ಥಾನವನ್ನು ಪಡೆದರು. ಎಂಎಸ್ಸಿಯಲ್ಲೂ ಅದೇ ಫಲಿತಾಂಶ. ಇಬ್ಬರೂ 1917ರಲ್ಲಿ ಕೊಲ್ಕತ್ತ ವಿಶ್ವವಿದ್ಯಾನಿಲಯದ ಸೈನ್ಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿದರು. ಬೋಧನೆಯೊಂದಿಗೆ ಏನಾದರೂ ಸಂಶೋಧನೆ ನಡೆಸಬೇಕೆಂದು ಅವರು ನಿರ್ಧರಿಸಿದರು.

ಇದಕ್ಕಾಗಿ ವಿಜ್ಞಾನದಲ್ಲಿ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅವರು ತಿಳಿಯಬೇಕಾಗಿತ್ತು. ವಿಜ್ಞಾನದ ಪತ್ರಿಕೆ (ಜರ್ನಲ್)ಗಳನ್ನು ಓದುವುದರಿಂದಷ್ಟೇ ಇದು ಸಾಧ್ಯವಾಗಬಹುದಿತ್ತು. ಜರ್ಮನ್ ಮತ್ತು ಫ್ರೆಂಚ್ ಭಾಷೆಗಳಲ್ಲಿಯೂ ಆಗ ಹಲವು ಸಂಶೋಧನಾ



ಪತ್ರಗಳು ಬರುತ್ತಿದ್ದವು. ಇವನ್ನು ಓದುವುದಕ್ಕಾಗಿ ಆ ಭಾಷೆಗಳನ್ನು ಬೋಸ್ ಕಲಿತರು. ಕೆಲಸಕ್ಕೆ ಸೇರಿದ ಒಂದು ವರ್ಷದೊಳಗೆ ಅನಿಲಗಳ ಚಲನಸಿದ್ಧಾಂತಕ್ಕೆ ಸಂಬಂಧಿಸಿದ ಬೋಸ್ ಮತ್ತು ಸಹಾ ಅವರ ಒಂದು ಸಂಶೋಧನಾ ಪತ್ರ ಇಂಗ್ಲೆಂಡಿನ 'ಫಿಲಸಾಫಿಕಲ್ ಮ್ಯಾಗಸಿನ್'ನಲ್ಲಿ ಪ್ರಕಟವಾಯಿತು.

1919 ರಲ್ಲಿ 'ಬುಲೆಟಿನ್ ಆಫ್ ಕೊಲ್ಕತ್ತ ಮ್ಯಾಥಮೆಟಿಕಲ್ ಸೊಸೈಟಿ' ಯಲ್ಲಿ ಬೋಸ್ ಅವರ ಎರಡು ಸಂಶೋಧನಾ ಪತ್ರಗಳು ಪ್ರಕಟವಾದವು. ಇನ್ನೆರಡು ಪತ್ರಗಳು 1920ರಲ್ಲಿ 'ಫಿಲಸಾಫಿಕಲ್ ಮ್ಯಾಗಸಿನ್'ನಲ್ಲಿ ಪ್ರಕಟವಾದವು.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಸುದ್ದಿಗೆ ಬಂದದ್ದು 'ದೇವ ಕಣ – 'ಗಾಡ್ ಪಾರ್ಟಿಕಲ್' ಪತ್ತೆಮಾಡಿದೆವು ಎಂದು ವಿಜ್ಞಾನಿಗಳು ಪ್ರಕಟಿಸಿದ ಸುದ್ದಿ. "ಈ ಗಾಡ್ ಪಾರ್ಟಿಕಲ್ ಅನ್ವೇಷಣೆಯಲ್ಲಿ ಪ್ರಥಮ ಸಂಶೋಧನಾ ಕಾರ್ಯ ನಿರ್ವಹಿಸಿದವರು ಭಾರತದ ಸತ್ಯೇಂದ್ರನಾಥ ಬೋಸ್, ಹಾಗಾಗಿ 'ಭಾರತ ದೇಶವು ಈ ಗಾಡ್ ಪಾರ್ಟಿಕಲ್ ಅನ್ವೇಷಣೆಯಲ್ಲಿ ಚಾರಿತ್ರಿಕವಾಗಿ ತಂದೆಯ ಸ್ಥಾನ ಹೊಂದಿದೆ" ಎಂದು ಸಿ ಇ ಆರ್ ಎನ್ ಪ್ರಮುಖ ವಿಜ್ಞಾನಿಗಳಾದ ಪಾಲೋ ಗಿಬೇಲಿನೋ ಅವರು ಇತ್ತೀಚೆಗೆ ನುಡಿದಿದ್ದರು. ಬೋಸ್ ಮತ್ತು ಐನ್ ಸ್ಟೀನ್ ಅವರ ನಂತರದಲ್ಲಿ ಪೀಟರ್ ಹಿಗ್ಸ್ ಅವರು ಈ ಕುರಿತು ಆಳವಾದ ಸಂಶೋಧನೆ ನಡೆಸಿದ್ದರು. ಇದೀಗ ಸಿ.ಇ.ಆರ್.ಎನ್. ಸಂಸ್ಥೆಯ ವಿಜ್ಞಾನಿಗಳ ಬೃಹತ್ ತಂಡ ಈ ಕುರಿತಾದ ಮಹತ್ವದ ಸಾಧನೆಗೆ ದಾಪುಗಾಲಿಟ್ಟಿದೆ.

ಅವರು ಸೋವಿಯತ್ ಒಕ್ಕೂಟ, ಡೆನ್ಮಾರ್ಕ್, ಚೆಕೊಸ್ಲೋವಾಕಿಯ–ಗಳನ್ನೊಳಗೊಂಡು ಅನೇಕ ದೇಶಗಳಿಗೆ ಭೇಟಿಕೊಟ್ಟರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಬ್ರಿಟಿಷರ ವಿರುದ್ಧ ಹೋರಾಟಗಳಲ್ಲಿ ಭಾಗವಹಿಸಿದ್ದ ಅವರು ದೇಶದ ಸ್ವಾತಂತ್ರ್ಯದ ಅವಶ್ಯಕತೆಯನ್ನು ಚೆನ್ನಾಗಿ ಅರಿತಿದ್ದರು. ರಸಾಯನಶಾಸ್ತ್ರ, ಜೀವಶಾಸ್ತ್ರ, ಭೂಗರ್ಭಶಾಸ್ತ್ರ, ತತ್ವಜ್ಞಾನ, ಕಲೆ, ಸಾಹಿತ್ಯ ಮೊದಲಾದ ವಿಷಯಗಳಲ್ಲೂ ಆಸಕ್ತಿಯುಳ್ಳವರಾಗಿದ್ದರು. ವಿಜ್ಞಾನದಲ್ಲಿ ಅವರ ಸೇವೆಯನ್ನು ಮಾನ್ಯಮಾಡಿ ಭಾರತ ಸರಕಾರ ಅವರಿಗೆ 1954ರಲ್ಲಿ ಪದ್ಮವಿಭೂಷಣ ಬಿರುದನ್ನು ನೀಡಿತು.

ಸಮಾಜಸೇವೆಯು ಬೋಸರ ಜೀವನದಲ್ಲಿ ಜೀವಂತ ಆದರ್ಶವಾಗಿತ್ತು. ಹಣವನ್ನು ಹಿಂಬಾಲಿಸದೇ ತಮ್ಮ ಸರ್ವಸ್ವವನ್ನೂ ವಿಜ್ಞಾನಕ್ಕಾಗಿ, ವಿದ್ಯಾರ್ಥಿಗಳಿಗಾಗಿ ಮತ್ತು ದೀನದಲಿತರ ಸೇವೆಗಾಗಿ ಅರ್ಪಿಸಿದರು. ತಮ್ಮ ಜೀವನವನ್ನೇ ರಾಷ್ಟ್ರಕ್ಕಾಗಿ ಮುಡಿಪಾಗಿಟ್ಟು ಜನರಿಗೆ ಉಜ್ವಲ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಸತ್ಯೇಂದ್ರನಾಥ್ ಬೋಸ್ 1974ರ ಫೆಬ್ರವರಿ 4ರಂದು ನಿಧನ ಹೊಂದಿದರು.

## ಎಲ್ಲೋ ಕೇಳಿದ ಕಥೆ

ಒಬ್ಬ ಬಾಲಕ, ಆತನಿಗಿದ್ದದ್ದು ಒಂದೇ ಕೈ – ಎಡಗೈ. ಆತನಿಗೆ ಕರಾಟೆ ಕಲಿಯುವ ಆಸೆ. ಸರಿ, ಗುರುವೊಬ್ಬ ಕಲಿಸಲಾರಂಭಿಸಿದ. ಒಂದೇ ರೀತಿಯ ಪಟ್ಟು, ತುಂಬಾ ಅಭ್ಯಾಸ ಮಾಡಿಸಿ, ಬಾಲಕನನ್ನು ಸ್ಪರ್ಧೆಗೆ ಕರೆದೊಯ್ದ. ಎದುರಾಳಿಗಳೆಲ್ಲ ಪರಿಣತರು. ಮೊದಲ ಹಂತದಲ್ಲಿ ಬಾಲಕ ಗೆದ್ದ!

ಎರಡನೆಯದನ್ನೂ ಗೆದ್ದ! ಕೊನೆಯ ಸುತ್ತು, ಅಂಗವಿಕಲ ಬಾಲಕನ ಬಗ್ಗೆ ಎಲ್ಲರಿಗೂ 'ಸೋತರೆ' ಎಂಬ ಕನಿಕರ. ಕೆಲವು ಬಾರಿ ಎದುರಾಳಿಯ ಪಟ್ಟಿನಿಂದ ಇವನಿಗೆ ಪೆಟ್ಟು. ಗುರು ಮಾತ್ರ ಶಾಂತವಾಗಿ ನಿಂತೇ ಇದ್ದ. 'ಪಂದ್ಯ ನಿಲ್ಲಿಸಬೇಕೆ?' ಎಂದು ತೀರ್ಪುಗಾರ ಕೇಳಿದರೆ, ಗುರು 'ಬೇಡ, ಬೇಡ, ಅವಶ್ಯಕತೆಯಿಲ್ಲ' ಎಂದ! ಅಂತೂ ಕೊನೆಗೆ ಬಾಲಕ ಗೆದ್ದೇ ಬಿಟ್ಟ. ಮನೆಗೆ ಗುರುವಿ ನೊಡನೆ ಹಿಂದಿರುಗುವಾಗ ಬಾಲಕ ಕೇಳಿದ 'ಮಾಸ್ಟರ್ ಮಾಸ್ಟರ್। ನಾನು ಗೆದ್ದಿದ್ದು ಹೇಗೆ? ನಾನು ಕಲಿತಿದ್ದದ್ದು ಒಂದೇ ಪಟ್ಟು!' ಗುರು ಹೇಳಿದ, 'ಮಗೂ, ನಿನಗೆ ಕಲಿಸಿದ್ದು ನಾನು ಒಂದೇ ಪಟ್ಟು, ಆದರೆ ಅದು ಅತಿ ಕಷ್ಟದ ಪಟ್ಟು! ಎದುರಾಳಿ ಪರಿಣತ ನಿಜ. ಆದರೆ ಈ ಪಟ್ಟಿನಲ್ಲಿ ಸೋಲಿಸಲು ಇರುವ ಉಪಾಯ ಒಂದೇ. ಅದು ನಿನ್ನ ಬಲಗೈ ಹಿಡಿಯುವುದು! ನಿನಗೆ ಬಲಗೈಯೇ ಇಲ್ಲ! ಅದೇ ನಿನ್ನ ಅತಿ ದೊಡ್ಡ ಸಾಮರ್ಥ್ಯ!'. ಅಸಾಮರ್ಥ್ಯತೆ ಎಲ್ಲರಲ್ಲೂ ಕೆಲ ಮಟ್ಟಿಗೆ ಇದ್ದಿದ್ದೇ. ಆದರೆ ಅದನ್ನೇ ತನ್ನ ಸಾಧನೆಯ ಗುರಾಣಿಯಾಗಿ ಬಳಸುವವನೇ ನಿಜವಾದ ಸಾಧಕ.

*1ನೇ ಪುಟದಿಂದ...*

## ಭಾರತಮಾತೆಯ ಸೇವೆಗಾಗಿ...

ಸ್ವಯಂಸೇವಕರು ಭಾಗವಹಿಸಿದರು. ಈ ಶಿಬಿರದಲ್ಲಿ ಘೋಷ್ ವಾದಕ ಸ್ವಯಂಸೇವಕರು 1200ರಷ್ಟು ಜನ ಇದ್ದರು. ಅಂದಿನ ದಿನಕ್ಕೆ ದೇಶದಲ್ಲೇ ಇದು ಅತಿದೊಡ್ಡ ಶಿಬಿರ ಮತ್ತು ಅತ್ಯಂತ ಹೆಚ್ಚು ಘೋಷ್ ವಾದಕರು ಭಾಗವಹಿಸಿದ್ದಾಗಿತ್ತು. 2007ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ದಕ್ಷಿಣ ಪ್ರಾಂತದ ಘೋಷ್ ಶಿಬಿರ. ಈ "ಸ್ವಾಭಿಮಾನ" ಪ್ರಾಂತ ಶಿಬಿರದಲ್ಲಿ (ದಾವಣಗೆರೆಯಿಂದ ಚಾಮರಾಜನಗರದವರೆಗೆ) 2753 ವಾದಕರು ಭಾಗವಹಿಸಿದರು.


ಅಖಿಲ ಭಾರತೀಯ ಸ್ತರದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಕಛ್‌ನಿಂದ ಕಾಮರೂಪದವರೆಗೆ ಭಾರತದ ಎಲ್ಲ ಪ್ರಾಂತಗಳಿಂದ ಬಂದ ಸ್ವಯಂಸೇವಕರು ಭಾಗವಹಿಸಿದ ದೆಹಲಿಯಲ್ಲಿ ನಡೆದ ಶ್ರೀ ಗುರೂಜೀ ಜನ್ಮಶತಾಬ್ದಿ ಸಮಾರೋಪ ಕಾರ್ಯಕ್ರಮ, 2016 ಬೆಂಗಳೂರಿನ ರೇವಾ ಕಾಲೇಜಿನಲ್ಲಿ ಸ್ವರಾಂಜಲಿ ಶೃಂಗ ಘೋಷ್ ಶಿಬಿರಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕೇರಳದಲ್ಲಿ ನಡೆದ 256 ಕಿಲೋಮೀಟರ್ ಕ್ರಮಿಸಿದ "ರಾಷ್ಟ್ರ ರಕ್ಷಾ ಸಂಚಲನ"ದಲ್ಲಿ 5000ಕ್ಕಿಂತ ಹೆಚ್ಚು, ಓಡಿಶಾದಲ್ಲಿ 3000, ರಾಜಸ್ಥಾನದ "ಸ್ವರಗೋವಿಂದಮ್" ಕಾರ್ಯಕ್ರಮದಲ್ಲಿ 1200 ಮತ್ತು ದೇಶದ ಹಲವಾರು ಪ್ರಾಂತಗಳಲ್ಲಿ ನಡೆದ ಅನೇಕ ಘೋಷ್ ಶಿಬಿರಗಳು ಮತ್ತು ಕಾರ್ಯಕ್ರಮಗಳು ಭಾರತದ ಪ್ರಾಙ್ಗಣೀಯ ಸಂಗೀತದ ವಿಕಾಸದಲ್ಲಿ ಮೈಲಿಗಲ್ಲುಗಳಾಗಿವೆ.

ತಮ್ಮ ಸಮಯವನ್ನು ಪ್ರತಿನಿತ್ಯ ಹಿಂದುಸಮಾಜದ ಸಂಪರ್ಕ ಮತ್ತು ಸಂಘಟನೆಯ ಕೆಲಸಕ್ಕೆ ಮೀಸಲಿಟ್ಟು, ಸ್ವಂತದ ಸಾವಿರಾರು ರೂಪಾಯಿಗಳ ಹಣವನ್ನು ವ್ಯಯಿಸಿ ವಾದ್ಯ, ಗಣವೇಷಗಳನ್ನು ಖರೀದಿಸಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಇನ್ನಷ್ಟು ಅಧಿಕ ಸಮಯವನ್ನು ಸ್ವರಸಾಧನೆಯಲ್ಲಿ ತೊಡಗಿಸಿ ವಾದ್ಯ ಮತ್ತು ವಾದನವನ್ನು ವೃತ್ತಿಯಾಗಿ ಬಳಸದೇ ಕೇವಲ ಭಾರತಮಾತೆಯ ಸೇವೆಗಾಗಿ ತಮ್ಮ ಪ್ರತಿಭೆಯನ್ನು ಸಮರ್ಪಿಸಿದ ಸಾಮಾನ್ಯರು ಘೋಷ್ ವಾದಕ ಸ್ವಯಂಸೇವಕರು.

– ಚಂದ್ರಶೇಖರ ಜಹಗೀರದಾರ

## ಪುಸ್ತಕ ಪರಿಚಯ




ಪುಸ್ತಕದ ಹೆಸರು: **ಬೌದ್ಧಿಕ ಕ್ಷತ್ರಿಯರು**
ಲೇಖಕರು: **ಡಾ. ಜಿ.ಬಿ. ಹರೀಶ**
ಪ್ರಕಾಶಕರು: **ಸಮೃದ್ಧ ಸಾಹಿತ್ಯ**
ಬೆಲೆ: **120/–**
ಪುಟಗಳು: **100**

ಯಾವುದೇ ದೇಶದಲ್ಲಿ ಅಲ್ಲಿನ ಬಹುಸಂಖ್ಯಾತರು ಅಂಚಿನ ಜನರ ಆಗುವುದು ಅಪರೂಪ ಭಾರತದಲ್ಲಿ ಇದು ವಾಸ್ತವ. ಎಸಿ ರೂಮಿನ ಚರ್ಚೆ, ಟಿವಿ, ಸೆಮಿನಾರಿನ ಆಚೆಗೊಂದು ವಿಶಾಲ ಭಾರತವಿದೆ. ಅದಕ್ಕೆ ಅದರದೇ ಆದ ಕನಸು ಮಿಸುಕಾಟವಿದೆ. ಇದನ್ನು ಅರ್ಥ ಮಾಡಿಕೊಂಡವರ ಒಂಬತ್ತು ಜನರ ಬಗೆಗೆ ಇಲ್ಲಿ ಲೇಖನಗಳಿವೆ. ಇದು ಲೇಖನಗಳ ಗುಚ್ಛ ಮಾತ್ರವಲ್ಲ. ದೇಸಿ ಚಿಂತಕರ ಪ್ರತಿಭೆಯ ಪ್ರವಾಹ ಕಟ್ಟಿಕೊಡುವ ಕಥನ. ಭಾರತ ತನಗಾಗಿ ವಿಶ್ವಕ್ಕಾಗಿ ಪುನರುತ್ಥಾನಗೊಳ್ಳಬೇಕು ಏಕೆ? ಹೇಗೆ? ಎಂಬ ವಿವರಗಳು ಈ ದಾರ್ಶನಿಕರ ವಿಚಾರದಲ್ಲಿದೆ.

ಈ ಕೃತಿಯು ವೀರ ಸಾವರ್ಕರ್ ಸೇರಿದಂತೆ ಸ್ವಾಮಿ ದಯಾನಂದ, ಡಾಕ್ಟರ್ ಹೆಡಗೇವಾರ್, ಮಹರ್ಷಿ ಶ್ರೀ ಅರಬಿಂದೋ, ಆನಂದ್ ಕುಮಾರಸ್ವಾಮಿ, ರಾಮ್‌ಸ್ವರೂಪ್, ಧರ್ಮಪಾಲ್, ಸೀತಾರಾಮ್ ಗೋಯಲ್ ಮತ್ತು ಕರ್ನಾಡ್ ಎಲ್ಸ್ಟ್‌ರ ಚಿಂತನೆ ಸಾಧನೆಗಳನ್ನು ಒಳಗೊಂಡಿದೆ. ಸತ್ಯವೇ ದೇವರು ಎಂದು ನಂಬಿದ್ದ ಇತಿಹಾಸಕಾರರು ಚಿಂತಕರು ಈಗಲೂ ತಮ್ಮ ಕೃತಿಗಳ ಮೂಲಕ ಜೀವಂತವಾಗಿದ್ದಾರೆ.

**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್

# ಸಾಲುದ್ದದ ಸುದ್ದಿಗಳು



ಕರ್ನಾಟಕದ ವಿದ್ಯುತ್ ಕಾರ್ಯದಕ್ಷತೆಯನ್ನು ವೃದ್ಧಿಸುವ ಸಲುವಾಗಿ ಕೇಂದ್ರ ಸರಕಾರವು 8,500 ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿದೆ. ಆರ್ಡಿಎಸ್ಎಸ್ ಯೋಜನೆಯಡಿ ಈ ಅನುದಾನವನ್ನು ಮಂಜೂರು ಮಾಡಲಾಗಿದೆ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ಹೇಳಿದ್ದಾರೆ. ಹೊಸ ಲೈನ್‌ಗಳ ಸ್ಥಾಪನೆ, ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿಕೆ, ಸಿಂಗಲ್ ಫೇಸ್ ಸಮಸ್ಯೆ ಪರಿಹಾರ, ಟ್ರಿಪ್ ಮುಂತಾದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಅನುದಾನವನ್ನು ಬಳಸಿಕೊಳ್ಳಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಒಟ್ಟು ಅನುದಾನದಲ್ಲಿ 1,100 ಕೋಟಿ ರೂಪಾಯಿಗಳನ್ನು ಮೆಸ್ಕಾಂಗೆ ಮೀಸಲಿಡಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಗೆ 290 ಕೋಟಿ ರೂಪಾಯಿ ಮೀಸಲಿಡಲಾಗುವುದು ಹಾಗು ಮಂಗಳೂರಿನಲ್ಲಿ 400kv ಸಬ್ಸ್ಟೇಶನ್ ನಿರ್ಮಾಣದ ಪ್ರಸ್ತಾವನೆ ಇದೆ. ಗ್ರಾಹಕರಿಗೆ ಮತ್ತು ಕೈಗಾರಿಕೆಗಳಿಗೆ ಗುಣಮಟ್ಟದ ವಿದ್ಯುತ್ ಸರಬರಾಜಿಗೆ ಇದು ಅನುಕೂಲ ಮಾಡಿಕೊಡಲಿದೆ. ಈ ನಿಟ್ಟಿನಲ್ಲಿ ನಾವು ಪರಿಶೀಲನೆ ನಡೆಸುತ್ತಿದ್ದೇವೆ ಎಂದಿದ್ದಾರೆ.




ಗಿಟ್ ಹಬ್‌ನಲ್ಲಿ ಮುಸ್ಲಿಂ ಮಹಿಳೆಯರ ಫೋಟೋಗಳನ್ನು 'ಹರಾಜು'ಗಾಗಿ ಹಂಚಿಕೊಳ್ಳಲಾದ 'ಬುಲ್ಲಿ ಬಾಯಿ' ಆಪಿನ ವಿವಾದ ಭುಗಿಲೆದ್ದ ಕೆಲವು ದಿನಗಳ ನಂತರ, ಹಿಂದೂ ಮಹಿಳೆಯರನ್ನು ಗುರಿಯಾಗಿಸುವ ಮತ್ತೊಂದು ಚಾನೆಲ್ ಟೆಲಿಗ್ರಾಂನಲ್ಲಿ ಕಾಣಿಸಿಕೊಂಡಿದೆ.ಟೆಲಿಗ್ರಾಂನಲ್ಲಿ ಹಿಂದೂ ಮಹಿಳೆಯರ ಫೋಟೋಗಳನ್ನು ತನ್ನ ಚಂದಾದಾರರಿಗ ಪ್ರಸಾರ ಮಾಡಿದ ಚಾನಲ್ ಅನ್ನು ನಿರ್ಬಂಧಿಸುವಂತೆ ಐಟಿ ಸಚಿವಾಲಯ ಮಂಗಳವಾರ ಆದೇಶಿಸಿದೆ. ಚಾನಲ್ ಅನ್ನು ಜೂನ್ 2021 ರಲ್ಲಿ ರಚಿಸಲಾಗಿದೆ ಎಂದು ವರದಿಯಾಗಿದೆ. ಟ್ವಿಟರ್ ಬಳಕೆದಾರರು ಚಾನಲ್ನ ವಿವರಗಳನ್ನು ಹಂಚಿಕೊಂಡ ನಂತರ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ವಿಷಯದ ಬಗ್ಗೆ ಮಾಹಿತಿ ಪಡೆದರು. ಉತ್ತರಿಸಿದ ಅವರು, ಚಾನಲ್ ಅನ್ನು ನಿರ್ಬಂಧಿಸಲಾಗಿದೆ ಮತ್ತು ಕ್ರಮಕ್ಕಾಗಿ ಭಾರತ ಸರ್ಕಾರವು ರಾಜ್ಯ ಪೊಲೀಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ ಎಂದು ತಿಳಿಸಿದರು. ಓಪನ್ ಸೋರ್ಸ್ ಪ್ಲಾಟ್ಫಾರ್ಮ್ ಗಿಟ್ ಹಬ್‌ನಲ್ಲಿ 'ಬುಲ್ಲಿ ಬಾಯಿ' ಹೆಸರಿನ ವೆಬ್ ಪೇಜ್ ಮೂಲಕ ಆನ್ಲೈನ್ನಲ್ಲಿ ಮುಸ್ಲಿಂ ಮಹಿಳೆಯರ 'ಹರಾಜು' ಮಾಡಲಾಗುತ್ತಿತ್ತು. ಈ ಕುರಿತು ಆಕ್ರೋಶ ಭುಗಿಲೆದ್ದ ಕೆಲವೇ ದಿನಗಳಲ್ಲಿ ಈ ಬೆಳವಣಿಗೆ ನಡೆದಿದೆ.

"ಅನಾಥರ ತಾಯಿ" ಎಂದೇ ಜನಪ್ರಿಯರಾಗಿದ್ದ ಖ್ಯಾತ ಸಾಮಾಜಿಕ ಕಾರ್ಯಕರ್ತೆ ಸಿಂಧೂತಾಯಿ ಸಪ್ಕಾಲ್ ಅವರು ಮಂಗಳವಾರ ಹೃದಯಾಘಾತದಿಂದ ಪುಣೆಯ ಆಸ್ಪತ್ರೆಯಲ್ಲಿ ನಿಧನರಾದರು. ಸಿಂಧೂತಾಯಿ ಸಪ್ಕಾಲ್ ಅವರು ದಶಕಗಳಿಂದ ಮಾಡಿದ ಅನಾಥರ ಸೇವೆಗಾಗಿ ಕಳೆದ ವರ್ಷ ಪದ್ಮಶ್ರೀ ಪುರಸ್ಕಾರ ಪಡೆದಿದ್ದರು. ಡಾ. ಸಿಂಧೂತಾಯಿ ಸನ್ಮತಿ ಬಾಲನಿಕೇತನ್ ಸಂಸ್ಥೆಯ ಮೂಲಕ 2000ಕ್ಕೂ ಹೆಚ್ಚು ಅನಾಥ ಮಕ್ಕಳನ್ನು



ಸತತ 54ವರ್ಷಗಳ ಕಾಲ ಸಲಹಿ ಪಾಲಿಸಿ ಪೋಷಿಸಿದ್ದರು. ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಕೇಂದ್ರ ಸಚಿವರು ಮತ್ತು ವಿವಿಧ ಪಕ್ಷಗಳ ಮುಖಂಡರು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಪ್ರಧಾನಿ ಮೋದಿ ಟ್ವೀಟ್ ಮಾಡಿ, "ಡಾ. ಸಿಂಧೂತಾಯಿ ಸಪ್ಕಾಲ್ ಅವರು ಸಮಾಜಕ್ಕೆ ಮಾಡಿದ ಉದಾತ್ತ ಸೇವೆಗಾಗಿ ಸ್ಮರಣೀಯರು. ಅವರ ಪ್ರಯತ್ನದಿಂದಾಗಿ, ಅನೇಕ ಮಕ್ಕಳು ಉತ್ತಮ ಗುಣಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ. ಅವರು ಹಿಂದುಳಿದ ಸಮುದಾಯಗಳಿಗಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆಕೆಯ ನಿಧನದಿಂದ ನೋವಾಗಿದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಸಂತಾಪಗಳು. ಓಂ ಶಾಂತಿ" ಎಂದಿದ್ದಾರೆ.

ದುಬೈ ಮೂಲದ ರಿಯಾಲ್ಟಿ ಸಂಸ್ಥೆ ಎಮಾರ್ ಪ್ರಾಪರ್ಟೀಸ್ ಸೋಮವಾರ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ 5 ಲಕ್ಷ ಚದರ ಅಡಿ ಶಾಪಿಂಗ್ ಮಾಲ್ ಅನ್ನು ಅಭಿವೃದ್ಧಿಪಡಿಸುವುದಾಗಿ ಹೇಳಿದೆ. ಈ ಉದ್ದೇಶಿತ ಯೋಜನೆಯಲ್ಲಿ ಹೂಡಿಕೆಗೆ ಅನುಕೂಲವಾಗುವಂತೆ ದುಬೈ ಮತ್ತು ಜಮ್ಮು – ಕಾಶ್ಮೀರ ಸರ್ಕಾರಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದು ಎಮಾರ್ ಹೇಳಿಕೆಯಲ್ಲಿ ತಿಳಿಸಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ಇದು ಮೊದಲ ಮಹತ್ವದ ಎಫ್‌ಡಿಐ ಹೂಡಿಕೆಯಾಗಿದೆ. ಒಪ್ಪಂದದ ಪ್ರಕಾರ, ಎಮಾರ್ ಶ್ರೀನಗರದಲ್ಲಿ 5,00,000 ಚದರ ಅಡಿ ಗಾತ್ರದ 'ಎಮಾರ್ ಮಾಲ್' ಅನ್ನು ಅಭಿವೃದ್ಧಿಪಡಿಸುತ್ತದೆ.

ಯುಎಇ ಮತ್ತು ಭಾರತವು ಸಮಗ್ರ ಕಾರ್ಯತಂತ್ರದ ಪಾಲುದಾರರಾಗಿವೆ ಮತ್ತು ಎಮಾರ್ನ ಈ ಯೋಜನೆಯು ಜಮ್ಮು ಮತ್ತು ಕಾಶ್ಮೀರದ ಹೆಗ್ಗುರುತಾಗಲಿದೆ. "ನಾನು ಎಮಾರ್ ಮತ್ತು ಈ ಯೋಜನೆಯಲ್ಲಿನ ಎಲ್ಲಾ ಪಾಲುದಾರರನ್ನು ಅಭಿನಂದಿಸಲು ಬಯಸುತ್ತೇನೆ ಮತ್ತು ಮುಂದಿನ ದಿನಗಳಲ್ಲಿ ಇಂತಹ ಅನೇಕ ಯೋಜನೆಗಳನ್ನು ನಾವು ನೋಡಲಿದ್ದೇವೆ ಎಂದು ನನಗೆ ಖಾತ್ರಿಯಿದೆ." ಎಂದು ಭಾರತದ ಯುಎಇ ರಾಯಭಾರಿ ಅಹ್ಮದ್ ಅಬ್ದುಲ್ ರಹಮಾನ್ ಅಲ್ಬನ್ನಾ ಹೇಳಿದ್ದಾರೆ. ಎಮಾರ್ ಸಂಸ್ಥಾಪಕ ಮೊಹಮ್ಮದ್ ಅಲಬ್ಬರ್ ಮಾತನಾಡಿ, ಕಂಪನಿಯು ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳಿಗೆ ಮತ್ತು ಪ್ರವಾಸಿಗರಿಗೆ ವಿಶ್ವ ದರ್ಜೆಯ ಮಾಲ್ ಅನುಭವವನ್ನು ನೀಡುವ ಉದ್ದೇಶವನ್ನು ಹೊಂದಿದೆ ಎಂದು ಹೇಳಿದ್ದಾರೆ.

ಈಶಾನ್ಯ ರೈಲ್ವೆಯ ಶೇಕಡಾ 75 ಕ್ಕಿಂತ ಹೆಚ್ಚು ಮಾರ್ಗಗಳನ್ನು ವಿದ್ಯುದ್ದೀಕರಿಸಲಾಗಿದೆ ಮತ್ತು 2022 ರ ಅಂತ್ಯದ ವೇಳೆಗೆ ಈಶಾನ್ಯ ರೈಲ್ವೆಯ ಮಾರ್ಗಗಳಲ್ಲಿ ಶೇಕಡಾ 100 ರಷ್ಟು ವಿದ್ಯುದ್ದೀಕರಣವನ್ನು ಸಾಧಿಸುವ ಸಾಧ್ಯತೆಯಿದೆ ಎಂದು ರೈಲ್ವೆ ಸಚಿವಾಲಯ ಹೇಳಿದೆ. ಈಶಾನ್ಯ ರೈಲ್ವೆಯ ಮುಖ್ಯ ಮಾರ್ಗಗಳ ವಿದ್ಯುದೀಕರಣದ ನಂತರ, ಹೈ ಸ್ಪೀಡ್ ಡೀಸೆಲ್ (HSD) ಮೇಲಿನ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ ಮತ್ತು 361 ಕೋಟಿ ರೂಪಾಯಿಗಳ ಉಳಿತಾಯವನ್ನು ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.



"CUF (ಕೆಪಾಸಿಟಿ ಯುಟಿಲೈಸೇಶನ್ ಫ್ಯಾಕ್ಟರ್) ಆಧಾರಿತ ಸೋಲಾರ್ ಮಾನಿಟರಿಂಗ್ ಸಿಸ್ಟಮ್ ಅನ್ನು ಅಳವಡಿಸಲಾಗಿದೆ, ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ 4.72 MWp ಸ್ಥಾಪಿತ ಸಾಮರ್ಥ್ಯದೊಂದಿಗೆ ಈ ವರ್ಷದಲ್ಲಿ 26% ಹೆಚ್ಚಿನ ಸೌರ ಶಕ್ತಿ ಉತ್ಪಾದನೆಗೆ ಕಾರಣವಾಗಿದೆ" ಎಂದು ಅದು ಹೇಳಿದೆ. ಈಶಾನ್ಯ ರೈಲ್ವೆಯಲ್ಲಿ ಆರಂಭಿಸುವ ಅಥವಾ ಪ್ರಯಾಣ ಅಂತ್ಯಗೊಳಿಸುವ ಒಟ್ಟು 31 ಜೋಡಿ ರೈಲುಗಳು ಹೆಡ್ ಆನ್ ಜನರೇಷನ್ (HOG) ವ್ಯವಸ್ಥೆಯಲ್ಲಿ ಚಲಿಸುತ್ತಿವೆ ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಸೌರ ವಿದ್ಯುತ್ ಶಕ್ತಿಗೆ ಹೆಚ್ಚಿನ ಉತ್ತೇಜನವನ್ನು ನೀಡಲಾಗುತ್ತಿದೆ. ವರದಿಗಳ ಪ್ರಕಾರ 2014 ಮತ್ತು 2021ರ ನಡುವೆ ಭಾರತದಲ್ಲಿ ಸೌರ ವಿದ್ಯುತ್ ಉತ್ಪಾದನೆಯಲ್ಲಿ 18 ಪಟ್ಟು ವೃದ್ಧಿಯಾಗಿದೆ. ಅಂದರೆ 2.63 ಗಿಗಾವ್ಯಾಟ್‌ನಿಂದ 47.66 ಗಿಗಾವ್ಯಾಟ್‌ಗೆ ಹೆಚ್ಚಳವಾಗಿದೆ. ಹೀಗಾಗಿ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಪಳೆಯುಳಿಕೆ ರಹಿತ ಮೂಲಗಳಿಂದ ಪಡೆಯುವ ವಿದ್ಯುತ್ನ ಪ್ರಮಾಣ ಶೇ.40ಕ್ಕಿಂತಲೂ ಹೆಚ್ಚಾಗಿದೆ. ಇನ್ನೊಂದೆಡೆ 2010 ರಿಂದ 2018ರ ಅವಧಿಯಲ್ಲಿ ಸೌರ ವಿದ್ಯುತ್ ಫಲಕಗಳ ಅಳವಡಿಕೆಯ ಯೋಜನೆಯ ವೆಚ್ಚದಲ್ಲಿ ಶೇ.80ರಷ್ಟು ಇಳಿಕೆಯಾಗಲಿದೆ ಎಂದು ಐಆರ್‌ಎನ್‌ಎ ಸಮೀಕ್ಷೆ ತಿಳಿಸಿದೆ. ಸರಕಾರ ಸೌರವಿದ್ಯುತ್‌ಗೆ ಹೆಚ್ಚಿನ ಉತ್ತೇಜನವನ್ನು ನೀಡುತ್ತಿರುವ ಹಿನ್ನೆಲೆಯಲ್ಲಿ ದೇಶದಲ್ಲಿ ಸೌರ ವಿದ್ಯುತ್ ಬಳಕೆಯ ಪ್ರಮಾಣ ವೃದ್ಧಿಯಾಗುತ್ತ ಸಾಗುತ್ತಿದೆ.



ರಾಷ್ಟ್ರವ್ಯಾಪಿ 15 –18 ವರ್ಷದ ಮಕ್ಕಳಿಗೆ ಲಸಿಕೆ ನೀಡಿಕೆ ಆರಂಭವಾಗಲಿದೆ. ಕರ್ನಾಟಕದಲ್ಲಿ ಮೊದಲ ದಿನ 4.03 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಲಸಿಕೆಯನ್ನು ನೀಡಲಾಗಿದ್ದು, ರಾಜ್ಯದಲ್ಲಿ ಒಟ್ಟು 4000 ಲಸಿಕೆ ಕೇಂದ್ರಗಳಲ್ಲಿ ಲಸಿಕೆಯನ್ನು ವಿತರಣೆ ಮಾಡಲಾಗಿದೆ. ಎಲ್ಲಾ ಮಕ್ಕಳಿಗೂ ಭಾರತ್ ಬಯೋಟೆಕ್ ಉತ್ಪಾದನೆ ಮಾಡುತ್ತಿರುವ ಕೊವ್ಯಾಕ್ಸಿನ್ ಲಸಿಕೆಯನ್ನು ನೀಡಲಾಗಿದೆ. 28 ದಿನಗಳ ನಂತರ ಎರಡನೇಯ ಡೋಸ್ ಪಡೆಯಲು ಎಲ್ಲಾ ಮಕ್ಕಳು ಅರ್ಹರಾಗಿದ್ದಾರೆ. ರಾಷ್ಟ್ರವ್ಯಾಪಿಯಾಗಿ 40 ಲಕ್ಷಕ್ಕೂ ಅಧಿಕ ಮಕ್ಕಳಿಗೆ ಕೊವ್ಯಾಕ್ಸಿನ್ ಲಸಿಕೆಯನ್ನು ಮೊದಲ ದಿನದಂದು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮಾನ್ಸುಖ್ ಮಾಂಡವೀಯ ತಿಳಿಸಿದ್ದಾರೆ. ಕೋವಿನ್ ಪೋರ್ಟಲ್ ನಲ್ಲಿ ದೇಶಾದ್ಯಂತ 27 ಲಕ್ಷಕ್ಕೂ ಅಧಿಕ ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚಿನವರು ಲಸಿಕೆ ಕೇಂದ್ರಕ್ಕೆ ಬಂದು ನೋಂದಣಿ ಮಾಡಿಸಿ ಲಸಿಕೆ ಪಡೆದಿದ್ದಾರೆ. 2007 ಮತ್ತು ಅದಕ್ಕಿಂತ ಮೊದಲು ಜನಿಸಿದ ಮಕ್ಕಳು ಲಸಿಕೆ ಪಡೆಯಲು ಅರ್ಹರು. 15ರಿಂದ 18 ವಯೋಮಿತಿಯ 7ರಿಂದ 8 ಕೋಟಿ ಮಕ್ಕಳಿಗೆ ಲಸಿಕೆ ಹಾಕುವ ಗುರಿಯನ್ನು ಸರ್ಕಾರ ಹೊಂದಿದೆ.

Date of Publication 10th JANUARY 2022 Permitted to post on 13-01-2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-01-2022

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org

ತ್ರೈವಾರ್ಷಿಕ ಚಂದಾ : ರೂ. 150.00



## ಗಾಲ್ವಾನ್ ಕಣಿವೆಯಲ್ಲಿ ಹೊಸ ವರ್ಷದಂದು ತ್ರಿವರ್ಣ ಧ್ವಜ!



ಹೊಸ ವರ್ಷದಂದು ಭಾರತೀಯ ಸೇನಾ ಯೋಧರು ಲಡಾಖ್ನ ಗಾಲ್ವಾನ್ ಕಣಿವೆಯಲ್ಲಿ ತ್ರಿವರ್ಣ ಧ್ವಜವನ್ನು ಹೆಮ್ಮೆಯಿಂದ ಹಾರಿಸಿದ್ದಾರೆ. ಈ ಚಿತ್ರಗಳು ಇದೀಗ ಹೊರಬಂದಿವೆ. ಭದ್ರತಾ ಸಂಸ್ಥೆಯ ಮೂಲಗಳಿಂದ ಬಿಡುಗಡೆಯಾದ ಫೋಟೋಗಳು ಜನವರಿ 1 ರಂದು ಚೀನಾದ ಕಮ್ಯುನಿಸ್ಟ್ ಪಕ್ಷದ ಮುಖವಾಣಿ ಗ್ಲೋಬಲ್ ಟೈಮ್ಸ್ ಹಂಚಿಕೊಂಡ ವೀಡಿಯೊಗೆ ಪ್ರಬಲವಾದ ಪ್ರತಿಕ್ರಿಯೆ ಎಂದು ಗ್ರಹಿಸಲಾಗಿದೆ. ಚೀನಾ ಹಂಚಿಕೊಂಡ ವೀಡಿಯೊದಲ್ಲಿ, ಗಾಲ್ವಾನ್ ಕಣಿವೆಯ ಮೇಲೆ ತನ್ನ ನಿಯಂತ್ರಣವನ್ನು ಹೊಂದಿದೆ ಎಂಬ ತಪ್ಪು ಮಾಹಿತಿಯನ್ನು ಹರಡಲು ಪ್ರಯತ್ನಿಸಲಾಗಿದೆ. ವೀಡಿಯೋದಲ್ಲಿನ ಈ ಪ್ರದೇಶದವು ಉಭಯ ದೇಶಗಳ ನಡುವಿನ ಸೇನಾರಹಿತ ವಲಯವನ್ನು ಉಲ್ಲಂಘಿಸುವುದಿಲ್ಲ ಎಂದು ಭಾರತೀಯ ಸೇನಾ ಮೂಲಗಳು ಸ್ಪಷ್ಟಪಡಿಸಿದ್ದವು. ಬೇರೆ ರೀತಿಯಲ್ಲಿ ಹೇಳುವುದಾದರೆ, ಧ್ವಜವನ್ನು ನಿರ್ವಿವಾದ ಚೀನಾದ ಅಧೀನದ ಪ್ರದೇಶಗಳಲ್ಲಿ ಹಾರಿಸಲಾಗುತ್ತಿದೆ ಮತ್ತು ಜೂನ್ 2020 ರಲ್ಲಿ ಭಾರತೀಯ ಮತ್ತು ಚೀನಾ ಸೈನಿಕರು ನಡುವೆ ಘರ್ಷಣೆ ನಡೆದ ನದಿಯ ತಿರುವಿನಲ್ಲಿ ಅಲ್ಲ ಎಂದಿದೆ.

ಆದರೂ ಕೆಲವು ಮಾಧ್ಯಮವು ಇದು ಭಾರತೀಯ ಭೂಪ್ರದೇಶ ಎಂಬ ಮೊಂಡು ವಾದವನ್ನು ಮುಂದಿಟ್ಟು ಭಾರತ ಸರ್ಕಾರ ಮತ್ತು ಭಾರತೀಯ ಸೇನೆಯನ್ನು ಹಳಿಯುವ ಪ್ರಯತ್ನ ಮಾಡಿವೆ.ಇದೀಗ ಗಾಲ್ವಾನ್ ಕಣಿವೆಯಲ್ಲಿ ಭಾರತೀಯ ಯೋಧರು ಕೈಯಲ್ಲಿ ತ್ರಿವರ್ಣ ಧ್ವಜದೊಂದಿಗೆ ನಿಂತಿರುವ ಚಿತ್ರಗಳು ಬಿಡುಗಡೆಯಾಗಿದ್ದು ಈ ಮೂಲಕ ಚೀನಾ ಧ್ವಜವನ್ನು ಹಾರಿಸಲಾಗುತ್ತಿದೆ ಎಂಬ ಹೇಳಿಕೆಗೆ ಭಾರತೀಯ ಸೈನಿಕರು ಪೂರ್ಣ ವಿರಾಮ ಹಾಕಿದ್ದಾರೆ.ಗಾಲ್ವಾನ್ ಕಣಿವೆಯಲ್ಲಿ ಹೊಸ ವರ್ಷದಂದು ಭಾರತೀಯ ಯೋಧರು ತ್ರಿವರ್ಣ ಧ್ವಜವನ್ನು ಹಾರಿಸಿರುವ ಫೋಟೋವನ್ನು ಭಾರತೀಯ ಮೂಲಗಳು ಬಿಡುಗಡೆ ಮಾಡಿದ್ದು ಚೀನಾ ಕುತಂತ್ರಕ್ಕೆ ತಕ್ಕ ಪ್ರತಿಕ್ರಿಯೆ ಸಿಕ್ಕಂತಾಗಿದೆ.

## ಜಾನುವಾರು ಕಳ್ಳಸಾಗಣೆಯಲ್ಲಿ ಗಣನೀಯ ಇಳಿಕೆ

ಜಾನುವಾರು ಕಳ್ಳಸಾಗಣೆ ನಿರ್ಮೂಲನೆಗೆ ಕೇಂದ್ರ ಸರ್ಕಾರ ಮಾಡುತ್ತಿರುವ ಪ್ರಯತ್ನಗಳು ಫಲ ನೀಡುತ್ತಿವೆ. ಭಾರತ–ಬಾಂಗ್ಲಾ ಗಡಿಯಲ್ಲಿ ಜಾನುವಾರು ಕಳ್ಳಸಾಗಣೆ ಗಣನೀಯವಾಗಿ ಕಡಿಮೆಯಾಗಿದೆ. 2015ರಲ್ಲಿ ಇದ್ದ 153,602 ಪ್ರಕರಣಗಳಿಂದ ನವೆಂಬರ್ 2021ರಲ್ಲಿ 20,415ಕ್ಕೆ ಜಾನುವಾರು ಕಳ್ಳಸಾಗಣೆ ಇಳಿದಿದೆ. 2017ರಲ್ಲಿ 1,19,299 ರಿಂದ 2018ರಲ್ಲಿ 63,716ಕ್ಕೆ ಪ್ರಕರಣ ಇಳಿದಿದ್ದು, ಶೇಕಡಾ 50ರಷ್ಟು ಕುಸಿತ ಕಂಡಿದೆ. ಕಳೆದ ಮೂರು ವರ್ಷಗಳಿಂದ ಸಂಖ್ಯೆಗಳು ಸ್ಥಿರವಾಗಿ ಕುಸಿಯುತ್ತಿವೆ. 2019 ಮತ್ತು 2020ರಲ್ಲಿ ಕ್ರಮವಾಗಿ 46,809 ಮತ್ತು 20,415ಕ್ಕೆ ಪ್ರಕರಣಗಳು ಕಡಿಮೆಯಾಗಿದೆ ಎಂದು ವರದಿ ಹೇಳಿದೆ.



ಗಡಿಯನ್ನು ಸರಿಯಾಗಿ ಮೇಲ್ವಿಚಾರಣೆ ಮಾಡಲು ಮತ್ತು ಈ ಪ್ರದೇಶದಲ್ಲಿ ಜಾನುವಾರು ಕಳ್ಳಸಾಗಣೆಯನ್ನು ಕೊನೆಗೊಳಿಸಲು ಬಿಎಸ್ಎಫ್ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿದೆ. ದೋಣಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಮತ್ತು ಗಡಿಯಾಚೆಗಿನ ಅಪರಾಧಿಯ ಮೇಲೆ ಗುಂಡಿನ ದಾಳಿಯ ಮೂಲಕ ಕಟ್ಟುನಿಟ್ಟಾದ ಕ್ರಮಗಳನ್ನು ಬಿಎಸ್ಎಫ್ ತೆಗೆದುಕೊಳ್ಳುವ ಮೂಲಕ ಕಳ್ಳಸಾಗಣೆದಾರರನ್ನು ಹೆಡೆಮುರಿ ಕಟ್ಟುವ ಕೆಲಸವನ್ನು ಮಾಡಲಾಗುತ್ತಿದೆ. BSF 2021ರಲ್ಲಿ ಅಧಿಕೃತ ಹೇಳಿಕೆಯಲ್ಲಿ ಜಾನುವಾರು ಕಳ್ಳಸಾಗಣೆಯನ್ನು ದೇಶದ್ರೋಹದ ಒಂದು ರೂಪವೆಂದು ಉಲ್ಲೇಖಿಸಿದೆ.

## ಅಫ್ಘಾನ್‌ಗೆ 5 ಲಕ್ಷ ಡೋಸ್ ಕೋವ್ಯಾಕ್ಸಿನ್ ಕಳುಹಿಸಿದ ಭಾರತ



ಭಾರತವು ಅಫ್ಘಾನಿಸ್ಥಾನಕ್ಕೆ ಐದು ಲಕ್ಷ ಡೋಸ್ ಕೋವಿಡ್ ಲಸಿಕೆಯಾದ ಕೋವ್ಯಾಕ್ಸಿನ್ ಅನ್ನು ಕಳುಹಿಸಿಕೊಟ್ಟಿದೆ. ಮಾನವೀಯ ನೆಲೆಯಲ್ಲಿ ಈ ನೆರವನ್ನು ಅಫ್ಘಾನ್ ಜನರಿಗೆ ಭಾರತ ನೀಡಿದೆ.ಈ ನೆರವನ್ನು ಕಾಬೂಲಿನ ಇಂದಿರಾಗಾಂಧಿ ಆಸ್ಪತ್ರೆಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಮುಂದಿನ ವಾರಗಳಲ್ಲಿ ಐದು ಲಕ್ಷ ಡೋಸ್‌ಗಳ ಮತ್ತೊಂದು ಬ್ಯಾಚ್ ಅನ್ನು ಸರಬರಾಜು ಮಾಡಲಾಗುವುದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಆಹಾರ ಧಾನ್ಯಗಳು, 10 ಲಕ್ಷ ಡೋಸ್ ಕೋವಿಡ್ ಲಸಿಕೆ ಮತ್ತು ಜೀವ ಉಳಿಸುವ ಅಗತ್ಯ ಔಷಧಗಳನ್ನು ಒಳಗೊಂಡಿರುವ ನೆರವನ್ನು ಅಫ್ಘಾನ್ ಜನರಿಗೆ ನೀಡಲು ಭಾರತ ಬದ್ಧವಾಗಿದೆ ಎಂದಿರುವ ಅವರು,ಕಳೆದ ತಿಂಗಳ ಆರಂಭದಲ್ಲಿ, ಭಾರತವು ವಿಶ್ವ ಆರೋಗ್ಯ ಸಂಸ್ಥೆಯ ಮೂಲಕ ಅಫ್ಘಾನಿಸ್ಥಾನಕ್ಕೆ 1.6 ಟನ್ ವೈದ್ಯಕೀಯ ನೆರವು ನೀಡಿದೆ. ಮುಂಬರುವ ವಾರಗಳಲ್ಲಿ ಭಾರತವು ಗೋಧಿ ಪೂರೈಕೆ ಮತ್ತು ಉಳಿದ ವೈದ್ಯಕೀಯ ಸಹಾಯವನ್ನು ನೀಡಲಿದೆ ಎಂದು ಸಚಿವಾಲಯ ತಿಳಿಸಿದೆ.ಈ ನಿಟ್ಟಿನಲ್ಲಿ ಸಾಗಣೆಯ ವಿಧಾನಗಳನ್ನು ಅಂತಿಮಗೊಳಿಸಲು ಭಾರತವು ಯುಎನ್ ಏಜೆನ್ಸಿಗಳು ಮತ್ತು ಇತರರೊಂದಿಗೆ ಸಂಪರ್ಕದಲ್ಲಿದೆ ಎಂದು ಅದು ಹೇಳಿದೆ.


## ಡಿಸೆಂಬರ್‌ವರೆಗೆ 1,806 ಕಿಸಾನ್ ರೈಲುಗಳು 5.9 ಲಕ್ಷ ಟನ್ ಉತ್ಪನ್ನಗಳನ್ನು ಸಾಗಿಸಿವೆ




ಭಾರತೀಯ ರೈಲ್ವೇಯು ಆಗಸ್ಟ್ 2020ರಿಂದ ಹಾಲು, ಮಾಂಸ ಮತ್ತು ಮೀನು ಸೇರಿದಂತೆ 5.9 ಲಕ್ಷ ಟನ್‌ಗಳಿಗೂ ಅಧಿಕ ಬೇಗ ಹಾಳಾಗುವ ಕೃಷಿ ಉತ್ಪನ್ನಗಳನ್ನು ಸಾಗಿಸುವ ಮೂಲಕ ದೇಶಾದ್ಯಂತ 153 ಮಾರ್ಗಗಳಲ್ಲಿ 1,806 ಕಿಸಾನ್ ರೈಲು ಸೇವೆಗಳನ್ನು ನಿರ್ವಹಿಸಿದೆ. ಈ ಮೂಲಕ ರೈತರಿಗೆ ವಿಶಾಲವಾದ ಮಾರುಕಟ್ಟೆಯನ್ನು ಒದಗಿಸುವಲ್ಲಿ ಸಹಕರಿಸಿದೆ.ಕೇಂದ್ರ ಬಜೆಟ್ 2020–21 ರಲ್ಲಿ ಮಾಡಿದ ಘೋಷಣೆಯ ಪ್ರಕಾರ, ಮೊದಲ ಕಿಸಾನ್ ರೈಲನ್ನು 7 ಆಗಸ್ಟ್ 2020 ರಂದು ದೇವ್ಲಾಲಿ (ಮಹಾರಾಷ್ಟ್ರ) ಮತ್ತು ದಾನಪುರ (ಬಿಹಾರ) ನಡುವೆ ಆರಂಭ ಮಾಡಲಾಯಿತು.ಹಣ್ಣುಗಳು, ತರಕಾರಿಗಳು, ಮಾಂಸ, ಕೋಳಿ, ಮೀನು ಮತ್ತು ಡೈರಿ ಉತ್ಪನ್ನಗಳನ್ನು ಉತ್ಪಾದನೆಗೊಳ್ಳುವ ಅಥವಾ ಹೆಚ್ಚುವರಿ ಇರುವ ಪ್ರದೇಶಗಳಿಂದ ಬೇಡಿಕೆ ಅಥವಾ ಕೊರತೆಯಿರುವ ಪ್ರದೇಶಗಳಿಗೆ ತ್ವರಿತವಾಗಿ ಸಾಗಾಣೆ ಮಾಡಲು ಕಿಸಾನ್ ರೈಲುಗಳನ್ನು ಭಾರತೀಯ ರೈಲ್ವೇ ಪರಿಚಯಿಸಿದೆ.

ಕೃಷಿ ಮತ್ತು ರೈತರ ಕಲ್ಯಾಣ ಮತ್ತು ಕೃಷಿ ಸಚಿವಾಲಯ, ಪಶುಸಂಗೋಪನೆ, ರಾಜ್ಯ ಸರ್ಕಾರಗಳ ಮೀನುಗಾರಿಕೆ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಏಜೆನ್ಸಿಗಳು, ಮಂಡಿಗಳು ಇತ್ಯಾದಿಗಳೊಂದಿಗೆ ಸಮಾಲೋಚಿಸಿ ಕಿಸಾನ್ ರೈಲು ಸೇವೆಗಳ ಚಲನೆಗೆ ಸಂಭಾವ್ಯ ಸರ್ಕ್ಯೂಟ್‌ಗಳನ್ನು ಗುರುತಿಸಲಾಗಿದೆ. ಕಿಸಾನ್ ರೈಲು ಸೇವೆಗಳಿಗಾಗಿ ಬೇಡಿಕೆಯ ಆಧಾರದ ಮೇಲೆ, ಆದ್ಯತೆಯ ಮೇಲೆ ರೇಕ್‌ಗಳನ್ನು ಒದಗಿಸಲಾಗುತ್ತದೆ. ಕಿಸಾನ್ ರೈಲು ಈರುಳ್ಳಿ, ಆಲೂಗಡ್ಡೆ, ಮಾವು, ಕಿತ್ತಳೆ, ಕ್ಯಾರೆಟ್, ದಾಳಿಂಬೆ, ಕ್ಯಾಪ್ಸಿಕಮ್, ಅನಾನಸ್, ಸೀತಾಫಲ, ಸೇಬು, ಚಿಕೂ ಮತ್ತು ಹೂವುಗಳಂತಹ ವಸ್ತುಗಳನ್ನು ಸಾಗಾಣೆ ಮಾಡುತ್ತದೆ.

ಉತ್ಪಾದನಾ ಕೇಂದ್ರಗಳನ್ನು ಮಾರುಕಟ್ಟೆಗಳು ಮತ್ತು ಬಳಕೆಯ ಕೇಂದ್ರಗಳಿಗೆ ಸಂಪರ್ಕಿಸುವ ಮೂಲಕ ಕೃಷಿ ವಲಯದಲ್ಲಿ ಆದಾಯವನ್ನು ಹೆಚ್ಚಿಸುವುದು ಕಿಸಾನ್ ರೈಲುಗಳನ್ನು ಓಡಿಸುವ ಪ್ರಾಥಮಿಕ ಉದ್ದೇಶವಾಗಿದೆ.ಈ ಕಿಸಾನ್ ರೈಲು ರೈಲುಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಲಾಗುತ್ತದೆ ಮತ್ತು ಯಾವುದೇ ವಿಳಂಬಗಳನ್ನು ತಪ್ಪಿಸಲು ಅವುಗಳ ಸಮಯಪ್ರಜ್ಞೆಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ.



## ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾದ 44 ನಕ್ಸಲರು

ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ನಿನ್ನೆ ಒಂಬತ್ತು ಮಹಿಳೆಯರು ಸೇರಿದಂತೆ 44 ನಕ್ಸಲರು ಶರಣಾಗಿದ್ದಾರೆ. ಈ ನಕ್ಸಲರು ಜಿಲ್ಲೆಯ ಚಿಂತಲ್ನಾರ್, ಕಿಸ್ತಾರಾಮ್ ಮತ್ತು ಭೇಜಿ ಪ್ರದೇಶಗಳಲ್ಲಿ ಸಕ್ರಿಯರಾಗಿದ್ದರು ಎಂದು ಮೂಲಗಳು ತಿಳಿಸಿವೆ. ಕರಿಗುಂಡಂ ಗ್ರಾಮದಲ್ಲಿ ಹೊಸದಾಗಿ ಸ್ಥಾಪಿಸಲಾದ ಪೊಲೀಸ್ ಶಿಬಿರದಲ್ಲಿ ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಸುಕ್ಮಾ ಎಸ್ಪಿ ಸುನಿಲ್ ಶರ್ಮಾ ತಿಳಿಸಿದ್ದಾರೆ.

ಶರಣಾದ ನಕ್ಸಲರಲ್ಲಿ ಒಬ್ಬನಾದ ಮಡ್ಕಂ ದುಲಾ ತನ್ನ ತಲೆಯ ಮೇಲೆ 2 ಲಕ್ಷ ರೂಪಾಯಿ ಬಹುಮಾನವನ್ನು ಹೊತ್ತಿದ್ದ. ಶರಣಾದ ಕಾರ್ಯಕರ್ತರು ತಾವು ಪೊಳ್ಳು ಮಾವೋವಾದಿ ಸಿದ್ಧಾಂತದಿಂದ ನಿರಾಶೆಗೊಂಡಿದ್ದೇವೆ ಮತ್ತು ನಕ್ಸಲರಿಗಾಗಿನ ಜಿಲ್ಲಾ ಪೋಲೀಸರ ಪುನರ್ವಸತಿ ಅಭಿಯಾನದ 'ಪುನಾ ನಾರ್ಕೋಮ್'ನಿಂದ ಪ್ರಭಾವಿತರಾಗಿದ್ದೇವೆ ಎಂದು ಹೇಳಿದ್ದಾರೆ. 'ಪುನಾ ನಾರ್ಕೋಮ್' ಅಂದರೆ ಗೊಂಡಿ ಭಾಷೆಯಲ್ಲಿ ಹೊಸ ಮುಂಜಾನೆ ಎಂದು ಅರ್ಥ. ಶರಣಾದ ನಕ್ಸಲರಿಗೆ ಛತ್ತೀಸ್‌ಗಡ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯ ಪ್ರಕಾರ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.